'ಮಾನಗೇಡಿ... ನಾಡಾಗಿಲ್ಲದ ಮಾನಗೇಡಿನ್ನ ತಂದು...' ಎಂದು ಅಪ್ಪ ಕುಳಿತಲ್ಲಿಂದಲೇ ಹೂವೇರಿಸುತ್ತಿದ್ದರೆ, ಇತ್ತ ಅದೇ ವೇಳೆಗೆ, ಚಕ್ಕಳ ಬಕ್ಕಳ ಕುಂತು, ತುತ್ತು ತುತ್ತಿಗೊಮ್ಮೆ ಅವ್ವನ ಅಡಿಗೆಯ ಪರಾಕು ಹಾಡುತ್ತ, ಕವಳ ಕತ್ತರಿಸುತ್ತಿದ್ದ.

'ಹೊಟ್ಟೀ ಹೊರಗಾತು. ತಂಬೂರಿ ಮನಿಗೆ ಬಂತು' ಅಂಬೋ ಶಂಕ್ರಣ್ಣನಂತಹ ಪರಾನ್ನಪುಷ್ಟ ಜೀವಿಗಳು ನಮ್ಮ ಮಧ್ಯೆ ಎಷ್ಟಿಲ್ಲಂತೀರಿ! ಇಂಥವರು ಎಂಥ ದುರ್ಗಮ ಕಾಡಿನಲ್ಲೂ ಒಂದು ಬೈಪಾಸ್‌ದಾರಿ ಕಂಡುಕೊಳ್ಳುತ್ತಾರೆ. ಆದರೆ, ಆ ದಾರಿ ವಾಮಮಾರ್ಗದ್ದಾಗಿರುತ್ತದೆ. ಇದು ಅವರ ಮುಗ್ಗಲಗೇಡಿತನ, ಕಳ್ಳ ಮನಸ್ಸಿನ ದಾರಿಗೆ ರತ್ನಗಂಬಳಿ ಹಾಸುವಂಥದ್ದು. ಬಾಯಿ ಇದ್ದ ಇವರು ಬರಗಾಲದಲ್ಲೂ ಬದುಕಬಲ್ಲರು. ಸಾಲಿಗರು ಬಂದು, ಮುಂದೊಂದು ದಿನ ಕಿಬ್ಬದಿಯ ಕೀಲು ಮುರಿಯಬಹುದು, ಹಾಗಂತ, ಇಂದು, ಈ ದಿನದ ಹೋಳಿಗೆ ತುಪ್ಪದೂಟ ತಪ್ಪಿಸಿಕೊಳ್ಳೊದುಂಟೆ? ಕಿಬ್ಬದಿಯ ಕೀಲು ಮುರಿದರೇನಾಯಿತು, ಈಗಂತೂ ಹೋಳಿಗೆಯೂಟವಾಯಿತಲ್ಲ! ಅಷ್ಟು ಸಾಕು, ಇವರಿಗೆ.

ಈ ಸಂದರ್ಭದಲ್ಲಿ ಹಳೆಯ ಜೋಕೊಂದು ನೆನಪಾಗುತ್ತಿದೆ. ಹಳ್ಳಿಯ ಗೌಡಪ್ಪನೊಬ್ಬ ರಾಜಧಾನಿಯಲ್ಲಿರುವ ಮಗನನ್ನು ಕಾಣಲು ಟ್ರೇನಿನಲ್ಲಿ ಹೊರಟಿದ್ದನಂತೆ. ಓದು ಬರಹ ಅರಿಯದ ಆತ, ತಿಳಿಯದೆ ಫಸ್ಟ್ ಕ್ಲಾಸ್ ಬೋಗಿ ಏರಿದ್ದ. ಇನ್ನು ಆತ ಇಳಿಯುವ ಊರು ಸಮೀಪಿಸುತ್ತಿದ್ದಂತೆ, ಟಿ.ಸಿ. ಕೈಗೆ ಸಿಕ್ಕಿಕೊಂಡ. ಟಿ.ಸಿ. ಭಾಷೆ ಗೌಡಪ್ಪನಿಗೂ, ಗೌಡಪ್ಪನ ಭಾಷೆ ಟಿ.ಸಿ.ಗೂ ಅರ್ಥವಾಗಲಿಲ್ಲ. ಕೊನೆಗೆ ಸಿಟ್ಟಿಗೆದ್ದ ಆ ಟಿ.ಸಿ. ಗೌಡಪ್ಪನ ಕಪಾಳಕ್ಕೆ ಎರಡೇಟು ಹೊಡೆಯುವುದಕ್ಕೂ, ಗೌಡಪ್ಪ ಇಳಿಯಬೇಕಾದ ಸ್ಟೇಷನ್ ಬರುವುದಕ್ಕೂ ಸರಿಹೋಯಿತಂತೆ.

'ಯೂ ಫೂಲ್ ಗೆಟ್ ಲಾಸ್ಟ್' ಎಂದು ಗೌಡಪ್ಪನನ್ನು ಟಿ.ಸಿ. ಕೆಳಗೆ ದಬ್ಬಿದ.

ಆ ನಂತರ, ಅಲ್ಲಿಂದ ತನ್ನ ರೂಮಿಗೆ ಬಂದ ಅಪ್ಪ ಗೌಡನನ್ನು, ಮಗ ಗೌಡ ಕೇಳಿದ, 'ಅಪ್ಪಾ, ಹೆಂಗಿತ್ತು ಪ್ರವಾಸ?'

ಅದಕ್ಕೆ ನಮ್ಮ ಗೌಡಪ್ಪ ಉತ್ತರಿಸಿದನಂತೆ, 'ಬಾಳಂದ್ರ ಬಾಳ ಆರಾಮ ಬಿಡು. ಮಗಾ, ಆದ್ರ, ಒಬ್ಬ ಕಪ್ಪ ಕೋಟಿನಂವಾ ಬಂದು, ಟಿಸ್ ಪುಸ್ ಅಂತ ಅಂಗ್ರೇಜಿಯೊಳಗ ಏನೋನೊ ಅಂದು, ಇಳಿಯೂ ಮುಂದ, ಕಪಾಳಕ್ಕ ಎರಡ ಹೋಡಿತಾನಾತು. ಹೊಡದ್ರೂ ಹೊಡೀವಲ್ಲಾಕ, ಪ್ರವಾಸ ಮಾತ್ರ ಖರೆವಂದ್ರೂ ಐಕ್ಲಾಸ್ ನೋಡ್ಲೆ'.

ನಿಜವಾಗಿಯೂ ಸುಖಿಜೀವಿಗಳೆಂದರೆ ಇವ್ರು! ಅಂದಹಾಗೆ, ಈ ಸುಖಿಜೀವಿಗಳು ಯಾವಾಗ್ಲೂ ಆಶಾವಾದಿಗಳು. 'ಆರಕ್ಕೇರಲಾಗದಿದ್ದರೇನಂತೆ, ಮೂರಕ್ಕಂತೂ ಇಳಿದಿಲ್ಲವಲ್ಲ' ಅಂಬೋ ಅಲ್ಪ ತೃಪ್ತರು. ಹೇಗೇ ಬಿದ್ದರೂ ಇವರ ಮೀಸೆ ಮಣ್ಣಾಗುವುದಿಲ್ಲ. ಮಣ್ಣೇ ಅಂಟಿಕೊಂಡಿದ್ದರೂ ಅದು ಮಣ್ಣಲ್ಲ, ಅದರಂಥದ್ದೇ ಬೇರೆ ಇನ್ನೊಂದು ವಸ್ತು ಎಂದು ಪ್ರತಿಪಾದಿಸಬಲ್ಲ, ಅಥವಾ ಅದು ನನಗೆ ಕಂಡಿಲ್ಲ ಎನ್ನುವ ಜಾಣ ಕುರುಡರು. ಇವರು ಅಸಾಧ್ಯ ಬುದ್ಧಿವಂತರು. ಸೋಲಲ್ಲೂ ಕೂಡಾ ಸಮಾಧಾನ ಚಿತ್ತ ಕಳೆದುಕೊಳ್ಳರು, ಇವರ ಅವಗುಣಗಳಲ್ಲೂ ಒಂದು ಪ್ಲಸ್ ಪಾಯಿಂಟ್ ಕಾಣಿಸುತ್ತದೆ. ಈಗ ಹೊಟ್ಟೆಪಕ್ಷದ ರಂಗಸ್ವಾಮಿಗಳನ್ನೆ ನೋಡಿ, ಗ್ರಾಮ ಪಂಚಾಯತ್‌ನಿಂದ ರಾಷ್ಟ್ರಾಧ್ಯಕ್ಷರ ಚುನಾವಣೆಯ ವರೆಗೆ, ಅದೆಷ್ಟು ಸಲ ಸ್ಪರ್ಧಿಸಿಲ್ಲ? ಒಂದರಲ್ಲೂ ಗೆಲುವು ಸಾಧಿಸದಿದ್ದರೂ, ಅವರ ಪ್ರತಿ ಸೋಲು, ಕೀರ್ತಿಯ ಸೋಪಾನವಾಗಿತ್ತು. ದಾಖಲೆ ಸಂಖ್ಯೆಯ ಸ್ಪರ್ಧೆ ಹಾಗೂ ಸೋಲು ಅವರ ವಿಶೇಷತೆಯೆನಿಸಿ, ಮುಂದೆ ಅದುವೆ ವಿಶ್ವ ದಾಖಲೆ ಸೇರಿತಲ್ಲ! ಇದೇನು ಸಾಮಾನ್ಯ ಸಾಧನೆಯೇ!

ಚುನಾವಣೆಯಲ್ಲಿ ಸೋತವರ ಕತೆ ಕೇಳುವಂತಿರುತ್ತದೆ. ಸೋತವಗೆ, ಅಂಥ ಘಟಾನುಘಟಿಯ